ಸಂಪನ್ನರಾದರೂ, ಅಲ್ಲಿಯೂ ಒಂದು ಸ್ಥಿರವಾದ ಕಾಯಕ ಕೈಗೂಡಲಿಲ್ಲ. ದಲಿತ ಸಮುದಾಯದ ದೀರ್ಘಕಾಲಿಕ ಒಳಿತು ಮತ್ತು ಹಕ್ಕುಗಳಿಗಾಗಿ ಸಂಸ್ಥಾಗತ ಚೌಕಟ್ಟಿನಲ್ಲಿ ಬೌದ್ಧಿಕವಾಗಿಯೂ, ತಕ್ಷಣದ ಹಕ್ಕುಗಳಿಗಾಗಿ ಆಂದೋಲನಗಳಲ್ಲೂ ಭಾಗವಹಿಸಬೇಕಿದ್ದ ತುರ್ತು ಇತ್ತು. ಈ ಎಲ್ಲದರ ನಡುವೆ ಅವರು ತಮ್ಮ ಸಾಂಸಾರಿಕ ಜೀವನಕ್ಕೆ ಕೊಡಬೇಕಾದಷ್ಟು ಗಮನವನ್ನು ಕೊಡಲಾಗಲಿಲ್ಲ. ಅದಕ್ಕೆ ತಕ್ಕ ಆರ್ಥಿಕ ಸವಲತ್ತನ್ನೂ ಏರ್ಪಡಿಸುವುದು ಕಷ್ಟವಾಗುತ್ತಿತ್ತು. ತೇಲ್ತುಂಬ್ಡೆ ಆ ಬಗ್ಗೆ ಹೆಚ್ಚು ಚರ್ಚಿಸುವುದಿಲ್ಲವಾದರೂ, ಈ ವಿಷಯವನ್ನು ನಾವು ಗಹನವಾಗಿ ಯೋಚಿಸಬೇಕು. ಗಾಂಧೀಜಿಗೆ ತಮ್ಮ ಆಂದೋಲನಕ್ಕೆ ಆರ್ಥಿಕ ನೆರವು ಬಜಾಜ್ ಮತ್ತು ಬಿರ್ಲಾರಿಂದ ಬರುತ್ತಿತ್ತು ಎನ್ನುವ ಮಾತಿದೆ. ಅದೇ ರೀತಿಯ ಸ್ಥಾಯಿ ಆರ್ಥಿಕ ಸಹಾಯ ಅಂಬೇಡ್ಕರ್ ಅವರ ಕಾರ್ಯಚಟುವಟಿಕೆಗಳಿಗೆ ಸಿಕ್ಕಲಿಲ್ಲ. ಹಿಂದುಳಿದ ವರ್ಗದಿಂದ ಬಂದ ಕಾರಣ ಅವರಿಗೆ ಸಾಕಷ್ಟು ಸಾಮಾಜಿಕ ಬಂಡವಾಳವಿರಲಿಲ್ಲ ಎನ್ನುವುದು ವಿದಿತವೇ. ಈ ಕಾರಣದಿಂದಾಗಿ ಅವರ ಸಾರ್ವಜನಿಕ ಜೀವನದ ಮೇಲೆ ಏನು ಪ್ರಭಾವ ಬೀರಿತು ಎನ್ನುವ ತುಲನಾತ್ಮಕ ಅಧ್ಯಯನವನ್ನು ನಾನು ಕಂಡಿಲ್ಲ. ತೇಲ್ತುಂಬ್ಡೆ ಪುಸ್ತಕದಲ್ಲೂ ಆ ಬಗ್ಗೆ ದೀರ್ಘ ಚರ್ಚೆಯಿಲ್ಲ.

ಅಂಬೇಡ್ಕರ್‌ಗೆ ವಿಸ್ತಾರವಾದ ಓದು ಮತ್ತು ಪುಸ್ತಕಗಳನ್ನು ಸಂಗ್ರಹಿಸುವ ಆಸಕ್ತಿಯಿದ್ದದ್ದರಿಂದ, ಸಂಪಾದನೆಯ ಬಹು ಭಾಗ ಓದು, ಬರವಣಿಗೆ ಮತ್ತು ಪ್ರಕಟಣೆಗೇ ಮೀಸಲಾಗಿರುತ್ತಿತ್ತು. ಆದರೆ ತೇಲ್ತುಂಬ್ಡೆ ಪುಸ್ತಕದಲ್ಲಿ ಕೌತುಕದ ವಿವರಗಳಿವೆ. ವೈಸ್‌ರಾಯ್ ಕಾರ್ಯಕಾರಿ ಮಂಡಲಿಯಲ್ಲಿ ನೇಮಕಗೊಂಡಾಗ ಪರಿಚಯವಾದ ಮಿಸ್ ಡ್ರೆಶರ್ – ಬಿಷಪ್ ಪಿಕೆಟ್ ಅವರನ್ನು ಪರಿಚಯಿಸಿಕೊಟ್ಟರಂತೆ. ಪಿಕೆಟ್ ಮನೆಯಲ್ಲಿದ್ದ ಪುಸ್ತಕಗಳನ್ನು ತೀವ್ರ ಕೌತುಕದಿಂದ ನೋಡುತ್ತಿದ್ದ ಅಂಬೇಡ್ಕರ್ ಅವರನ್ನು ಕಂಡು – 'ಆಸಕ್ತಿಯಿರುವ ಪುಸ್ತಕಗಳನ್ನು ಒಯ್ಯಿರಿ' ಎಂದು ಆತ ಹೇಳಿದರಂತೆ. ಸುಮಾರು ಇಪ್ಪತ್ತೈದು ಮೂವತ್ತು ಪುಸ್ತಕಗಳನ್ನು ಆಯ್ದು ಕೊಂಡೊಯ್ದ ಅಂಬೇಡ್ಕರ್ ಆ ಪುಸ್ತಕಗಳನ್ನು ವಾಪಸ್ಸು ಮಾಡಲೇ ಇಲ್ಲ. ಕಡೆಗೂ ಪಿಕೆಟ್, ಅಂಬೇಡ್ಕರ್ ಅವರ ಹಿಂದೆ ಬಿದ್ದದ್ದರಿಂದ ಕೆಲವು ಪುಸ್ತಕಗಳು ಸಿಕ್ಕರೂ ಮಿಕ್ಕವನ್ನು ವಾಪಸ್ಸು ಪಡೆಯಲು ಸಾಧ್ಯವಾಗಲಿಲ್ಲ. ತಮ್ಮ ಬಳಿ ಪುಸ್ತಕಗಳನ್ನು ಕೊಳ್ಳಲು ಸಾಕಷ್ಟು ಹಣವಿರಲಿಲ್ಲವಾದ್ದರಿಂದ ಪುಸ್ತಕಗಳನ್ನು 'ಬೇಡಿಯೋ, ಎರವಲು ಪಡೆದೋ, ಕದ್ದೋ' ತಮ್ಮ ಸಂಗ್ರಹವನ್ನು ಬೆಳೆಸಿಕೊಳ್ಳುತ್ತಿದ್ದರೆಂದು ಅಂಬೇಡ್ಕರ್ ಸ್ವತಃ ಹೇಳಿದ್ದರಂತೆ.

ಸಂವಿಧಾನ ಸಭೆಯ ಚರ್ಚೆಗಳಲ್ಲಿ ಒಂದು ವಿಷಯದಲ್ಲಿ ಅಂಬೇಡ್ಕರ್ ತಮ್ಮ ವಿಶ್ಲೇಷಣೆಯಲ್ಲಿ ಎಡವಿದ್ದನ್ನು ತೇಲ್ತುಂಬ್ಡೆ ದಾಖಲಿಸುತ್ತಾರೆ. ನ್ಯಾಯಮೂರ್ತಿಗಳು ನಿವೃತ್ತಿಯ ನಂತರ ಯಾವುದೇ ಸರ್ಕಾರಿ ಪದವಿಯನ್ನು ಒಪ್ಪುವುದಕ್ಕೆ ನಿರ್ಬಂಧವಿರಬೇಕು ಎನ್ನುವ ಪ್ರಸ್ತಾಪ ಬಂದಾಗ ಅಂಬೇಡ್ಕರ್ ಅದರ ಅವಶ್ಯಕತೆಯಿಲ್ಲವೆಂದು ವಾದಿಸಿದರಂತೆ. ಅವರ ಅಂದಾಜಿನ ಪ್ರಕಾರ, ಕೋರ್ಟು ಕಚೇರಿಯಿರುವುದು ಜನರ ನಡುವೆ ತಗಾದೆಗಳನ್ನು ಇತ್ಯರ್ಥ ಮಾಡಲು. ಸರ್ಕಾರ ಮತ್ತು ನಾಗರಿಕರ ನಡುವೆ ಎಷ್ಟು ಮಾತ್ರ ತಗಾದೆಯಿದ್ದೀತು? ಹೀಗಾಗಿ ಸರ್ಕಾರ ನ್ಯಾಯಾಲಯದ ಮೇಲೆ ಯಾವುದೇ ಒತ್ತಡ ಹೇರುವ ಸಂದರ್ಭವಿರುವುದಿಲ್ಲ ಎಂದು ವಾದಿಸಿದ್ದರು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ, ಕೋರ್ಟುಗಳಲ್ಲಿ ದಾವೆ ಹೂಡುವುದರಲ್ಲಿ ಸರ್ಕಾರದ್ದೇ ಹೆಚ್ಚಿನ ಪಾಲಿದ್ದು, ಅರ್ಧಕ್ಕಿಂತ ಹೆಚ್ಚಿನ ಕಟ್ಲೆಗಳು ಸರ್ಕಾರದ ವಿರುದ್ಧವೇ ಇರುವ ವಿಚಿತ್ರ ಪರಿಸ್ಥಿತಿ ಉಂಟಾಗಿದೆ. ದೇಶಭಕ್ತಿ ಮತ್ತು ಸಂವಿಧಾನ ಪಿತಾಮಹ ಎಂದು ಭಕ್ತಿಯಿಂದ ಅಂಬೇಡ್ಕರ್ ಅವರ ಹೆಸರಿನ ಮುಂದೆ ಉದ್ದಂಡ ನಮಸ್ಕಾರ ಹಾಕುವ ಈ ಕಾಲದಲ್ಲಿ ಎಲ್ಲರೂ ಗಮನಿಸಬೇಕಾದ್ದು ಇಂದಿನ ಪರಿಸ್ಥಿತಿಯಲ್ಲಿ ಒಪ್ಪಲು ಸಾಧ್ಯವೇ ಆಗದಂತಹ ಅವರ ನಿಲುವುಗಳು.

ಅನೇಕ ವಿಷಯಗಳ ಬಗ್ಗೆ ಅವರ ನಿಲುವುಗಳು ಭಿನ್ನವಾಗಿದ್ದುವು. ಇಂದು ಅವರ ಬರಹದಿಂದ ಬಂದ, ಅವರೇ ರಚಿಸಿದ ಸಂವಿಧಾನದ ಮೇಲೆ ಆಣೆ-ಭಾಷೆ ಮಾಡುವ ಸಂದರ್ಭದಲ್ಲಿ ಅಂಬೇಡ್ಕರ್ ಅವರೇ ಆ ಸಂವಿಧಾನದ ಬಗ್ಗೆ ತಮಗಿದ್ದ ಭಿನ್ನಾಭಿಪ್ರಾಯ ಮತ್ತು ನಿರಾಶೆಯನ್ನು ವ್ಯಕ್ತಪಡಿಸಿದ್ದರು ಎನ್ನುವುದನ್ನು ಮರೆಯುತ್ತೇವೆ. ಅವರ ನಾಯಕತ್ವದಲ್ಲಿ ಸ್ಥಾಪಿಸಿದ್ದ 'ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್' (ಎಸ್.ಸಿ.ಎಫ್) 1951–52ರ ಚುನಾವಣೆಯಲ್ಲಿ ಭಾಗವಹಿಸಲೆಂದು ಬಿಡುಗಡೆ ಮಾಡಿದ ಪಕ್ಷದ ಪ್ರಣಾಳಿಕೆಯಲ್ಲಿ